OS 166/2015
PW-1

ದಿನಾಂಕ 13-08-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಹೆಚ್ಚುವರಿ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ಎಸ್ ಎಚ್ ವಕೀಲರಿಂದಃ</u>**

1. ನಾನು ನಿವೃತ್ತ ಸಿ ಆರ್ ಪಿ ಎಫ್ ಯೋಧನಿರುವುದರಿಂದ ನನಗೆ ರಿಸರ್ವೇಶನ ಆಧಾರದ ಮೇಲೆ ಯಾವುದೇ ನೌಕರಿ ಸಿಗುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಿದ ಸಿ ಆರ್ ಪಿ ಎಫ್ ಹುದ್ದೆಯು ಭಾರತ ಸರಕಾರದ ಗೃಹ ಖಾತೆಯ ಅಡಿಯಲ್ಲಿ ಬರುತ್ತದೆ ಎಂದರೆ ಸರಿ. ನಾನು ಮಾಜಿ ಸೈನಿಕನು ಅಲ್ಲ ಎಂದರೆ ಸರಿಯಲ್ಲ. ನನಗೆ ಜಿಲ್ಲಾ ಸೈನಿಕ ಸಂಘದಿಂದ ಮಾಜಿ ಸೈನಿಕನೆಂದು ಗುರುತಿನ ಚೀಟಿಯನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸೈನಿಕ ಸಂಘದಿಂದ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಸೈನಿಕ ಬೋರ್ಡ ಇದೆ ಎಂದರೆ ಸಾಕ್ಷಿಯು ಅದು ಸೈನಿಕರಿಗೆ ಸಂಬಂಧಪಟ್ಟಂತೆ ಪ್ಯಾರಾ ಸೈನಿಕರಿಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸೈನಿಕ ಅಲ್ಲದೇ ಇರುವುದರಿಂದ ಜಿಲ್ಲಾ ಸೈನಿಕ ಬೋರ್ಡನಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಭಾರತೀಯ ಪ್ಯಾರಾ ಮಿಲಿಟರಿಗೆ ಸಂಬಂದಪಟ್ಟ ಸೈನಿಕ ಇರುವುದರಿಂದ ಸದರಿ ಬೋರ್ಡನಲ್ಲಿ ನನ್ನ ಹೆಸರು ಇರುವುದಿಲ್ಲ ಎಂದು ನುಡಿಯುತ್ತಾರೆ.

2. ಸಿ ಆರ್ ಪಿ ಎಫ ಮತ್ತು ಬಿ ಎಸ್ ಎಫ್ ಎರಡು ದಳಗಳು ಭಾರತೀಯ ಸರಕಾರದ ಅಡಿಯಲ್ಲಿ ಬರುತ್ತವೆ ಎಂದರೆ ಸರಿ. ಸೇನಾದಳ, ವಾಯುದಳ ಮತ್ತು ನೌಕಾದಳ ಗಳು ಭಾರತೀಯ ಸರಕಾರ ಮತ್ತು ಮಾನ್ಯ ರಾಷ್ಟ್ರಪತಿಯವರ ಅಡಿಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ನಾನು ಸಿ ಆರ್ ಪಿ ಎಫ್ ದಳದಲ್ಲಿ ಕೆಲಸ ಮಾಡಿರುವುದರಿಂದ ಅದರ ದುರುಪಯೋಗ ಪಡಿಸಿಕೊಂಡು ಪೊಲೀಸ ಠಾಣೆಯಲ್ಲಿ ನನ್ನ ಪ್ರಭಾವ ಬೀರಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಭಾವನ್ನು ಬೀರಿ ನಿಪಿ-6 ರಂತೆ ಮಾನ್ಯ ಎಸ್ ಪಿ ಹಾವೇರಿಯವರಿಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ ಕಬ್ಜಾ ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಸಹಾಯದಿಂದ ದಾವಾ ಆಸ್ತಿಯನ್ನು ಪ್ರತಿವಾದಿಯ ಸ್ವಾಧಿನದಿಂದ ತಪ್ಪಿಸಲು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಪ್ರತಿವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ಪ್ರತಿವಾದಿಯು ಹಾನಗಲ್ಲ ತಹಶೀಲ್ದಾರ ಅವರಿಗೆ ರಕ್ಷಣೆ ಕೋರಿ ನಿಪಿ-15 ರಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಮಾನ್ಯ ತಹಶೀಲ್ದಾರ ಅವರು ದಾವಾ ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದಂತೆ ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ನಿರ್ದೇಶನ ನೀಡಿದ್ದರೂ ಸಹ ನಿಪಿ-6, ನಿಪಿ-12,13 ರ ದಾಖಲೆಗಳನ್ನು ಮೋಸದಿಂದ ಸೃಷ್ಠಿಕೊಂಡಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯು ಪೊಲೀಸ ಠಾಣೆಯಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ತಾನೇ ಸ್ವಾಧೀನದಲ್ಲಿಟ್ಟುಕೊಂಡು ವಹಿವಾಟು ಮಾಡುತ್ತಿದ್ದೇನೆ ಎಂದು ನಿಪಿ-11 ರಂತೆ ಹೇಳಿಕೆಯನ್ನು ನೀಡಿರುತ್ತಾನೆ ಎಂದರೆ ಸರಿ. ನಿಪಿ-6 ರಿಂದ ನಿಪಿ-16 ರ ದಾಖಲೆಗಳನ್ನು ನನ್ನ ದಾವೆಗೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ನೊಂದಾಯಿತ ಬಂದೂಕು ಇದೆ ಎಂದರೆ ಸರಿ. ನಾನು ಆ ಬಂದೂಕಿನ ಸಹಾಯದಿಂದ ಸಾರ್ವಜನಿಕರನ್ನು ಹೆದರಿಸಿ ಅವರ ಆಸ್ತಿಗಳನ್ನು ಪಡೆಯಲು ಪ್ರಯತ್ನ ಪಟ್ಟಿರುತ್ತೇನೆ ಎಂದು ಈ ಹಿಂದೆ ನನ್ನ ಮೇಲೆ ಚಳುವಳಿಗಳು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಪ್ರತಿವಾದಿಗೂ ಸಹ ನಾನು ಬಂದೂಕು ತೋರಿಸಿ ಹೆದರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ

OS 166/2015
PW-1